## ಪ್ರಸಂಗ-1

ಆ ವಿದ್ಯಾರ್ಥಿಯ ಹೆಸರು ಧನುಷ್. (ಹೆಸರು ಬದಲಿಸಲಾಗಿದೆ). ಆತನಿಗೆ ಮಾತಿಗೆ ಸಂಬಂಧಿಸಿದ ಅಂಗವೈಕಲ್ಯವಿದೆ. ವೈದ್ಯನಾಗಬೇಕೆಂಬ ದೊಡ್ಡ ಹಂಬಲ ಮತ್ತು ಗುರಿಯೊಡನೆ ಹಗಲಿರುಳು ಶ್ರಮಪಟ್ಟು ಓದಿ ಕೇಂದ್ರ ಸರ್ಕಾರದ 'ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ'ಯವರು ನಡೆಸುವ 'ನೀಟ್' ಪರೀಕ್ಷೆಯನ್ನು ಯಶಸ್ವಿಯಾಗಿ ಎದುರಿಸಿ, ಪ್ರವೇಶಕ್ಕೆ ಅಗತ್ಯವಾದಷ್ಟು ಅಂಕಗಳನ್ನು ಸಂಪಾದಿಸಿದ್ದ. ಯಾವುದೇ ವೃತ್ತಿಪರ ಶಿಕ್ಷಣ ಪಡೆಯಲು ಕಾಯ್ದಿರಿಸಿದ ಸೀಟುಗಳಿಗೆ ಪ್ರವೇಶ ಪಡೆಯಲು ನಿಗದಿತ ಮಾನದಂಡಗಳನ್ನು ಪೂರೈಸಬೇಕಾಗುತ್ತದೆ. ಆ ಮಾನದಂಡಗಳನ್ನೂ ಧನುಷ್ ಪೂರೈಸಿದ್ದ. ಜೊತೆಗೆ, ಸರ್ಕಾರ ನಿಗದಿಪಡಿಸಿದ ಪ್ರಮಾಣಕ್ಕಿಂತ ತುಸು ಹೆಚ್ಚೇ ಅಂಗವೈಕಲ್ಯ ಆತನಿಗಿತ್ತು. ಅಗತ್ಯಕ್ಕಿಂತ ಹೆಚ್ಚಿನ ಅಂಗವೈಕಲ್ಯವಿದೆ, ಇದು ಆತನ ವಿದ್ಯಾಭ್ಯಾಸಕ್ಕೆ ತೊಂದರೆ ನೀಡಬಹುದು ಎಂಬ ಕಾರಣ ನೀಡಿ ಕೌನ್ಸಿಲಿಂಗ್‌ಗೆ ಹಾಜರಾದ ಧನುಷ್‌ನನ್ನು ಅನರ್ಹಗೊಳಿಸಿದ 'ನ್ಯಾಷನಲ್ ಮೆಡಿಕಲ್ ಕಮಿಷನ್'ನ ಅಧಿಕಾರಿಗಳು ಪ್ರವೇಶ ನಿರಾಕರಿಸಿ, ಆತನ ಎಂಬಿಬಿಎಸ್ ಅಧ್ಯಯನ ಅಸಾಧ್ಯ ಎಂದು ಬಿಟ್ಟರು.

ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ದೊರೆಯದೆ ಹತಾಶಗೊಂಡ ಧನುಷ್, 'ತಾನು ವೈದ್ಯನಾಗಲೇಬೇಕು, ತನಗೆ ಓದಲು ಅವಕಾಶ ಮಾಡಿಕೊಡಿ' ಎಂದು ಸುಪ್ರೀಂ ಕೋರ್ಟ್ ಮೊರೆ ಹೋದ. ಅಹವಾಲನ್ನು ಆಲಿಸಿದ ನ್ಯಾಯಾಲಯವು, ಎಂಬಿಬಿಎಸ್ ಕಲಿಯಲು ಧನುಷ್‌ಗೆ ಎಲ್ಲ ಅರ್ಹತೆ ಇದೆ ಎಂದು ತೀರ್ಪು ನೀಡಿತು; 'ನ್ಯಾಷನಲ್ ಮೆಡಿಕಲ್ ಕಮಿಷನ್'ನವರು ವೈದ್ಯಕೀಯ ಕೋರ್ಸ್ ಕಲಿಯಲು ಬೇಕಾದ ಎಲ್ಲಾ ಸವಲತ್ತುಗಳನ್ನು ಆತನಿಗೆ ನೀಡಬೇಕು ಎಂದು ತಾಕೀತು ಮಾಡಿತು.

## ಪ್ರಸಂಗ-2

ಹೆಸರು ಇರಾ ಸಿಂಘಾಲ್. 2014ನೇ ಇಸವಿಯಲ್ಲಿ 'ಸಿವಿಲ್ ಸರ್ವಿಸಸ್' ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿ (ರ‍್ಯಾಂಕ್) ಪಡೆದಾಕೆ. ಅದಕ್ಕೂ ಮುನ್ನ 'ಇಂಡಿಯನ್ ರೆವಿನ್ಯೂ ಸರ್ವೀಸಸ್' ಪರೀಕ್ಷೆಯಲ್ಲಿ ಮೂರು ಬಾರಿ ಉನ್ನತ ರ‍್ಯಾಂಕ್ ಗಳಿಸಿದ್ದರು. ಸಂಬಂಧಿಸಿದ ಸಂದರ್ಶನಗಳನ್ನು ಯಶಸ್ವಿಯಾಗಿ ಮುಗಿಸಿದ್ದರು. ಆದರೂ ಅವರಿಗೆ ಕೆಲಸ ಸಿಕ್ಕಿರಲಿಲ್ಲ. ಅದಕ್ಕೆ ಕಾರಣ, ಅವರಿಗಿದ್ದ ಬೆನ್ನುಮೂಳೆಯ ಸಮಸ್ಯೆ. ಇರಾ ಅವರು ಸ್ಕೋಲಿಯೋಸಿಸ್ ಎಂಬ ನ್ಯೂನತೆಯಿಂದ ಬಳಲುತ್ತಿದ್ದರು. ತಮಗೆ ನಾಗರಿಕ ಸೇವಾ ಹುದ್ದೆಯನ್ನು ನಿರಾಕರಿಸಿದ್ದರಿಂದ 'ಕೇಂದ್ರೀಯ ಆಡಳಿತ ನ್ಯಾಯಮಂಡಳಿ' ಮುಂದೆ ಕೇಸು ದಾಖಲಿಸಿದ ಇರಾ, ಮಂಡಳಿಯವರು ನಿಗದಿಪಡಿಸಿದಷ್ಟು (ಶೇ. 40) ಅಂಗವೈಕಲ್ಯ ತಮಗಿದೆ ಎಂದು ವಾದಿಸಿ ಕೇಸು ಗೆದ್ದು ಐಎಎಸ್ ಅಧಿಕಾರಿಯಾಗಿ ನಿಯುಕ್ತಿಗೊಂಡರು. ಈಗ ದೆಹಲಿಯಲ್ಲಿ ಕೆಲಸದಲ್ಲಿದ್ದಾರೆ.

## ಪ್ರಸಂಗ-3

2023ರ ಮಹಾರಾಷ್ಟ್ರ ಕೇಡರ್‌ನ ಪೂಜಾ ಖೇಡ್ಕರ್ ಎಂಬ ಮಹಿಳಾ ಐಎಎಸ್ ಅಧಿಕಾರಿಯೊಬ್ಬರು ತಮ್ಮ ಅಂಗವೈಕಲ್ಯದ ಬಗ್ಗೆ ಸುಳ್ಳು ಪ್ರಮಾಣಪತ್ರ ನೀಡಿ ಪರಿಮಿತಿಗಿಂತ ಹೆಚ್ಚಿನ ಅವಕಾಶಗಳನ್ನು ಪಡೆದು, ಸಿವಿಲ್ ಸರ್ವಿಸ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಉನ್ನತ ಹುದ್ದೆ ಗಿಟ್ಟಿಸಿಕೊಂಡಿದ್ದಾರೆ ಎಂಬುದು ಕಾನೂನಾತ್ಮಕವಾಗಿ ರುಜುವಾತಾಯಿತು. ಪೂಜಾ ಅವರನ್ನು ನಾಗರಿಕ ಸೇವಾ ಹುದ್ದೆಯಿಂದ ವಜಾಗೊಳಿಸಿ ಆದೇಶ ಹೊರಡಿಸಲಾಯಿತು.

ಮೊದಲ ಎರಡು ಪ್ರಸಂಗಗಳಲ್ಲಿ ವಿಶೇಷ ಚೇತನರಿಗೆ ನಿಗದಿಪಡಿಸಿದ ನಿಯಮಗಳಿಂದ ಅನ್ಯಾಯವಾಗಿತ್ತು. ಅದನ್ನು ಸಂಬಂಧಪಟ್ಟವರು ಸರಿಪಡಿಸಿದರು. ಮೂರನೇ ಪ್ರಸಂಗದಲ್ಲಿ ವಿಶೇಷ ಸವಲತ್ತನ್ನು ದುರುಪಯೋಗಪಡಿಸಿಕೊಳ್ಳಲಾಗಿತ್ತು. ಅದಕ್ಕೆ ಸರಿಯಾದ ಶಿಕ್ಷೆ ಆಗಿದೆ.

ಮೊದಲನೆಯ ಪ್ರಸಂಗದಲ್ಲಿ ಇದೇ ಅಕ್ಟೋಬರ್ 10, 2024ರಂದು ಅರ್ಜಿದಾರನ ಪರವಾಗಿ ತೀರ್ಪು ನೀಡಿದ ಸರ್ವೋಚ್ಚ ನ್ಯಾಯಾಲಯವು, 'ವಿಕಲಚೇತನರ ಕುರಿತಾಗಿ ರೂಪುಗೊಂಡಿರುವ ನಿಯಮಗಳನ್ನು ಅವರಿಗೆ ಅವಕಾಶ ನೀಡುವುದಕ್ಕಿಂತ ಅವಕಾಶದಿಂದ ವಂಚಿತರಾಗುವಂತೆ ರೂಪಿಸಲಾಗಿದೆ ಎಂದು ಅನಿಸುತ್ತಿದೆ, ಇದು ಸರಿಯಲ್ಲ' ಎಂದು ಖಾರವಾಗಿ ಹೇಳಿತು.

ಯಾವುದೇ ವ್ಯಕ್ತಿಯ ದೈಹಿಕ ನ್ಯೂನತೆ ಶೇ. 40ಕ್ಕಿಂತ ಹೆಚ್ಚಿದ್ದರೆ ಆ ನ್ಯೂನತೆಯನ್ನು 'ಬೆಂಚ್ ಮಾರ್ಕ್ ಡಿಸೆಬಿಲಿಟಿ' ಎನ್ನುತ್ತಾರೆ. ಸರ್ಕಾರಿ ಹುದ್ದೆಗಳನ್ನು ಸೇರಲು ಅದಕ್ಕೆ ಸಂಬಂಧಿಸಿದ ಪರೀಕ್ಷೆಗಳನ್ನು ಕಷ್ಟಪಟ್ಟು ಬರೆದು ಉತ್ತೀರ್ಣರಾಗಿ ವಿಕಲಾಂಗತೆಗೆ ಸಂಬಂಧಿಸಿದ ಮಾನದಂಡಗಳನ್ನು ಪೂರೈಸಿರುವ ಅನೇಕರು ಆಯಾ ಸಂಸ್ಥೆಗಳು ತೆಗೆದುಕೊಳ್ಳುವ ಅಪಕ್ವ ನಿರ್ಧಾರಗಳಿಗೆ ಬಲಿಯಾಗಿ ಈಗಲೂ ನೌಕರಿಯಿಂದ ವಂಚಿತರಾಗಿದ್ದಾರೆ. 2021ರ ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಪಾಸ್ ಆಗಿ, ಆಯ್ಕೆ ಪ್ರಕ್ರಿಯೆಗೂ ಮುನ್ನ ನಿಗದಿಪಡಿಸಲಾಗಿದ್ದ ಮಾನದಂಡ ಪೂರೈಸಿರುವ ಏಳು ಮಂದಿ ವಿಕಲಚೇತನರು ಈಗಲೂ ಕೆಲಸ ದೊರಕದೆ ಅಸಹಾಯಕರಾಗಿ ನ್ಯಾಯಾಲಯಗಳ ಮೊರೆ ಹೋಗುತ್ತಿದ್ದಾರೆ. ಇಂದಿನವರೆಗೂ ಉದ್ಯೋಗ ತರಬೇತಿ ವಿಭಾಗದಿಂದ ಅವರಿಗೆ ಯಾವುದೇ ಅಂತಿಮ ಕರೆ ಬಂದಿಲ್ಲ.

### ಬೆಂಚ್ ಮಾರ್ಕ್ ಡಿಸೆಬಿಲಿಟಿ ಎಂದರೆ...

'ಬೆಂಚ್ ಮಾರ್ಕ್ ಡಿಸೆಬಿಲಿಟಿ'ಗೆ ಸಂಬಂಧಿಸಿದಂತೆ ಎರಡು ಮುಖ್ಯವಾದ ಸಂಗತಿಗಳಿವೆ. ಒಂದು, ಕ್ರಿಯಾತ್ಮಕ ವರ್ಗೀಕರಣ. ಇದು ನ್ಯೂನತೆಯನ್ನು ಗುರುತಿಸಿ, ಅದರ ವಿಧವನ್ನು ತಿಳಿಸುವ ವಿಧಾನ. ಎರಡನೆಯದು, ದೈಹಿಕ ಅಳತೆಗಳನ್ನಾಧರಿಸಿ ವ್ಯಕ್ತಿಯು ಯಾವ ಯಾವ ಕೆಲಸ ಮಾಡಬಹುದು ಎಂಬುದನ್ನು ನಿರ್ಧರಿಸುವ ಮಾನದಂಡ. 'ಲೋಕೋಮೋಟರ್ ಡಿಸೆಬಿಲಿಟಿ' (ಕಾಲು ಮತ್ತು ಕೈ ವೈಕಲ್ಯ – ಚಲನವಲನ ದೋಷ), ಸೆರೆಬ್ರಲ್ ಪಾಲ್ಸಿ



### ವಿಶ್ವವಿಖ್ಯಾತ ವಿಕಲಾಂಗರು

| | |
|---|---|
| ಫ್ರೀಡಾ ಕಹಲೋ | ಕಲಾವಿದೆ |
| ಜಾನ್ ನ್ಯಾಶ್ | ನೋಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ |
| ಸ್ಟೀಫನ್ ಹಾಕಿಂಗ್ | ಕಾಸ್ಮಿಕ್ ವಿಜ್ಞಾನಿ |
| ನಿಕ್ ಉಜುಸಿಕ್ | ಮೋಟಿವೇಷನಲ್ ಸ್ಪೀಕರ್ |
| ಆಂಡ್ರಿಯಾ ಬೊಸೆಲ್ಲಿ | ಸಂಗೀತ ನಿರ್ದೇಶಕ |
| ಮೈಕಲ್ ಜೇ ಫಾಕ್ಸ್ | ಸಿನಿಮಾ ಹೀರೊ |
| ಅಲೆಕ್ಸ್ ಜನಾರ್ಡಿ | ಪ್ಯಾರಾಲಿಂಪಿಕ್ ಚಿನ್ನದ ಪದಕ ವಿಜೇತ |
| ಆರೋನ್ ಪೋದರಿಂಗಂ | ವೀಲ್ ಚೇರ್ ಸ್ಕೇಟರ್ |

- ಶಿಕ್ಷಣ ಸಂಪಾದಿಸಿರುವ ಅಂಗವಿಕಲ ಮಹಿಳೆಯರ ಪ್ರಮಾಣ ಶೇ. 55ರಷ್ಟಿದೆ.
- ನಮ್ಮಲ್ಲಿರುವ ಒಟ್ಟು ಅಂಗವಿಕಲರ ಪೈಕಿ ಶೇ. 56ರಷ್ಟು ಪುರುಷರು ಇದ್ದರೆ, ಉಳಿದ ಶೇ. 44ರಷ್ಟು ಮಹಿಳೆಯರಾಗಿದ್ದಾರೆ.
- ಗ್ರಾಮೀಣ ಪ್ರದೇಶಗಳಲ್ಲಿ 2.1ಕೋಟಿ ಅಂಗವಿಕಲರು ಇದ್ದರೆ, ನಗರ ಪ್ರದೇಶಗಳಲ್ಲಿರುವ ಅಂಗವಿಕಲರ ಒಟ್ಟು ಸಂಖ್ಯೆ 1.3 ಕೋಟಿ.